# ಕೂಸು ಕಂದಯ್ಯ ಒಳ ಹೊರಗೆ ಆಡಿದರೆ...



■ ಸ್ವಯಂಪ್ರಭಾ

ಪುಟಾಣಿ ಕಂದ ತೊಟ್ಟಿಲಲ್ಲಿ ಮಲಗಿರುವಾಗ ಮನೆಯ ವಾತಾವರಣ ಬಹಳ ಸುಂದರವಾಗಿರುತ್ತದೆ. ಮನೆಯಲ್ಲಿ ಗಟ್ಟಿದನಿಯಲ್ಲಿ ಮಾತನಾಡುವ ಮುನ್ನ ಒಂದು ಕ್ಷಣ ಪರಿಸ್ಥಿತಿಯನ್ನು ಅವಲೋಕಿಸುತ್ತೇವೆ. 'ಮಗು ಮಲಗಿದೆಯೆ?' ಎಂದು ಹೆಂಡತಿಯ ಬಳಿ ಗಂಡ ಕಣ್ಸನ್ನೆಯಲ್ಲಿಯೇ ಕೇಳುತ್ತಾನೆ. ಕಾಲಿಂಗ್ ಬೆಲ್ ಒತ್ತುವ ಬದಲು, ಮೆಸೇಜ್ ಮಾಡಿ 'ಬಾಗ್ಲು ತೆಗೆ' ಎಂದು ಹೇಳುತ್ತಾನೆ. ಗಂಡನ ತೋಳಿನ ಮೇಲೆ ಮಲಗಿದ ಮಗು ಎಚ್ಚರಾಗದೇ ಇರಲಿ ಎಂದು ಅಮ್ಮ ಮೆತ್ತಗೆ ಬೀರು ಬಾಗಿಲು ತೆರೆದು ಸೀರೆಯನ್ನು ಆಯ್ದುಕೊಳ್ಳುತ್ತಾಳೆ. ಅಷ್ಟೇ ಮೆತ್ತಗೆ, ಮನೆಯಿಂದ ಹೊರಗೆ ಅಡಿಯಿಡುತ್ತಾಳೆ. ಕಾರಿನ ಲಾಕ್ ತೆರೆಯುವಾಗ, ಮೊದಲು ಸೈಲೆಂಟ್ ಬಟನ್ ಒತ್ತಿದ ಬಳಿಕ ಲಾಕ್ ಓಪನ್ ಮಾಡುತ್ತಾಳೆ.

ಅಜ್ಜಿ–ಅಜ್ಜ, ದೊಡ್ಡಪ್ಪ–ದೊಡ್ಡಮ್ಮ ಇರುವ ತುಸು ದೊಡ್ಡ ಕುಟುಂಬವಾದರೆ, ಎಲ್ಲರೂ ಹೀಗೆಯೇ ಮಾತು ಮಾತಿಗೂ, ಪ್ರತೀ ಕೆಲಸಕ್ಕೂ ಮುನ್ನ 'ಮಗು ಎಲ್ಲಿದೆ? ಪುಟ್ಟು ಮಲಗಿದ್ಯಾ...' ಎಂದು ಕೇಳಿಕೊಳ್ಳುತ್ತಾರೆ. ಪುಟ್ಟ ಮಗುವೆಂದರೆ ಹಾಗೆಯೇ, ಇಡೀ ಮನೆಯನ್ನು ನಿರ್ದೇಶಿಸುವ ಶಕ್ತಿ ಅದಕ್ಕಿದೆ. ಭಾರೀ ಗಾತ್ರವೂ, ಜೋರು ಧ್ವನಿಯೂ ಇದ್ದರೆ ಪರಿಸ್ಥಿತಿಯನ್ನು ಆಳಬಹುದು ಎಂಬ ಮಾತೇ ಸುಳ್ಳು ಎಂಬಂತೆ ಪುಟಾಣಿ ಮಗು ತನ್ನ ಮೃದು ಗುಲಾಬಿ ಗಲ್ಲವನ್ನು ಅಗಲವಾಗಿಸಿ ನಗುತ್ತಾ, ಇಡೀ ಮನೆಯನ್ನು ತನ್ನ ಅಳು–ನಗುವಿನಲ್ಲಿ ನಿರ್ದೇಶಿಸುತ್ತದೆ. ಬೇಕಿದ್ದರೆ ಗಮನಿಸಿ ನೋಡಿ. ಮಗುವಿದ್ದ ಮನೆಯಲ್ಲಿ ಸಮಯಕ್ಕೆ ಓಡುಗಾಲು.

ಮನೆಗೆ ಮತ್ತು ಬದುಕಿಗೆ ಮಗುವೊಂದರ ಪ್ರವೇಶವಾದ ಕೂಡಲೇ ಎಲ್ಲರೂ ಇಷ್ಟೊಂದು ಜಾಗೃತ ಮನಸ್ಥಿತಿಯಲ್ಲಿ ಇರುವುದಕ್ಕೆ ಕಾರಣ ಮಗುವಿನ ಮೇಲಿನ ಪ್ರೀತಿಯೇ. ನಮ್ಮ ಮನೆಯ ಮಗು, ಚೆನ್ನಾಗಿರಬೇಕು, ನೆಮ್ಮದಿಯಿಂದ ನಗು ನಗುತ್ತಾ ಇರಬೇಕು ಎಂದು ಬಯಸುತ್ತೇವೆ. ಆ ಮಗು ಬೆಳೆಯುವುದಕ್ಕೆ ಸಕಾರಾತ್ಮಕ ವಾತಾವರಣವನ್ನು ಕಲ್ಪಿಸಲು, ಅಪ್ಪ ಮತ್ತು ಅಮ್ಮ ಇಬ್ಬರೂ ಸೇರಿ ಹಗಲು ರಾತ್ರಿ ಯೋಚಿಸುತ್ತಾರೆ, ದುಡಿಯುತ್ತಾರೆ ಮತ್ತು ಗಳಿಸಿ, ಕೂಡಿಡುತ್ತಾರೆ. ಮಗುವಿನ ಎಳೆಯ ಮನಸ್ಸು ನೋಯದಂತೆ, ಗಾಸಿಯಾಗದಂತೆ ಶ್ರಮವಹಿಸುತ್ತಾರೆ. ಆದರೆ, ಈ ಎಚ್ಚರ–ಜಾಗೃತಿಯ ಮನಸ್ಥಿತಿ, ಸೂಕ್ಷ್ಮಪ್ರಜ್ಞೆಯು ಮನೆಯಿಂದ ಹೊರಗೆ ಬಂದ ಕೂಡಲೇ ಯಾಕೆ ಮಾಯವಾಗುತ್ತದೆ?

ದೊಡ್ಡವರು ತಮ್ಮ ವೃತ್ತಿ ಕ್ಷೇತ್ರದಲ್ಲಿ ಇದೇ ರೀತಿಯ ಸೂಕ್ಷ್ಮ ಮನಸ್ಥಿತಿಯಿಂದಲೇ ವರ್ತಿಸಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಮನೆಯೊಳಗಿನ ತ್ಯಾಜ್ಯ ವಿಲೇವಾರಿ ಮಾಡುವಾಗ ನಮ್ಮನೆಯ ಪ್ರೀತಿಯ ಮಗುವಿನ ನೆನಪು ಮಾಡಿಕೊಂಡರೆ ಹಸಿಕಸ ಮತ್ತು ಒಣಕಸವನ್ನು ಪ್ರತ್ಯೇಕಿಸಬೇಕು, ತನ್ನ ಮಗು ಓಡಾಡುವ ಪರಿಸರ ಸ್ವಚ್ಛವಿರಬೇಕು ಎಂಬ ಕಾಳಜಿಯಿರುತ್ತದೆ. ರಸ್ತೆಯನ್ನು ಎಲ್ಲೆಂದರಲ್ಲಿ ಅಗೆಯಲು ಅನುಮತಿ ನೀಡುವ ಮುನ್ನ, ನಮ್ಮದೇ ಮನೆಯ ಮಗು ಅಲ್ಲಿ ನಡೆದುಹೋಗುವುದನ್ನು ನೆನಪಿಸಿಕೊಂಡರೆ, ಆ ಕೆಲಸ ಚುರುಕಿನಿಂದ ನಡೆಯುತ್ತದೆ, ಬೇಗ ಮುಕ್ತಾಯವಾಗುತ್ತದೆ. ಸಿನಿಮಾವೊಂದರ ಕಥೆಯನ್ನು ಕಟ್ಟುವಾಗ, ಹಿಂಸೆಯ ದೃಶ್ಯಗಳನ್ನು ನೇಯುವಾಗ ಮಕ್ಕಳ ನೆನಪು ಮಾಡಿಕೊಳ್ಳುವುದನ್ನು ಏಕೆ ಮರೆತು ಬಿಡುತ್ತೇವೆಂದು ಗೊತ್ತಾಗುವುದಿಲ್ಲ.

**ದೊಡ್ಡವರು ತಮ್ಮ ಮಕ್ಕಳಿಗೆ ಆರ್ಥಿಕವಾಗಿ ಲಾಭವಾಗಬಹುದಾದ ವಿಚಾರಗಳ ಬಗ್ಗೆಯಷ್ಟೇ ಗಮನಹರಿಸಿದರೆ, ಆ ಹಂತದಲ್ಲಿ ಪೋಷಕರಾಗಿ ಅವರು ಸೋತಿರುತ್ತಾರೆ. ಪರೋಕ್ಷವಾಗಿ ತಮ್ಮ ಮಕ್ಕಳಿಗೇ ಮೋಸ ಮಾಡಿರುತ್ತಾರೆ.**

ಎಷ್ಟೋ ಸಂದರ್ಭಗಳಲ್ಲಿ, 'ಪೇರೆಂಟಿಂಗ್' ಎಂಬ ಶಿಕ್ಷಣವನ್ನು ನಮ್ಮ ಮನೆಯೊಳಗಿನ ವಿಚಾರಗಳಿಗೆ ಮಾತ್ರ ಅನ್ವಯಿಸಿ ನೋಡುತ್ತೇವೆಯೇ ವಿನಾ ಅದನ್ನು ಸಾಮಾಜಿಕ ವ್ಯವಸ್ಥೆಗೆ ಅನ್ವಯಿಸಿ ನೋಡುವುದಿಲ್ಲ. ಆದರೆ ಪೇರೆಂಟಿಂಗ್ ಎಂಬ ಪರಿಕಲ್ಪನೆಯು ಹೀಗೆ ಒಂದು ಸೀಮಿತ ಚೌಕಟ್ಟಿನೊಳಗೆ ಬಂಧಿಯಾದುದಲ್ಲ. 'ನನ್ನ ಮಗು ಚೆನ್ನಾಗಿರಬೇಕಾದರೆ, ಚುರುಕಾಗಿರಬೇಕಾದರೆ, ಯಶಸ್ವಿ ಜೀವನ ನಡೆಸಬೇಕಾದರೆ ಏನೇನು ಮಾಡಬೇಕು' ಎಂಬ ಪ್ರಶ್ನೆಗಳಿಗೆ ಇರುವ ಒಂದೆರಡು ಸಾಲಿನ ಉತ್ತರ ಪೇರೆಂಟಿಂಗ್ ಅಲ್ಲ. ಮನೆಯಿಂದ ಹೊರಗೆಯೂ ಮಗುವಿನ ಚುರುಕುತನವು ಸಕಾರಾತ್ಮಕವಾಗಿ ಇರುವಂತಹ ವ್ಯವಸ್ಥೆಯನ್ನು ರೂಪಿಸುವ ಜವಾಬ್ದಾರಿಯು ಪೋಷಣೆಯ ಭಾಗವಾಗಿದೆ. ಯಶಸ್ಸು ಮತ್ತು ಸೋಲು ಎಂಬ ಎರಡು ಕಪ್ಪು ಬಿಳುಪಿನ ಕ್ಷೇತ್ರಗಳಿಗೆ ಬದಲಾಗಿ ಹಲವಾರು ಸಾಧ್ಯತೆಗಳನ್ನು ಗುರುತಿಸುವ ಮತ್ತು ಅವುಗಳನ್ನು ಪ್ರೀತಿಯಿಂದ ಸ್ವೀಕರಿಸುವ ಮುಕ್ತ ಮನಸ್ಸನ್ನು ರೂಪಿಸುವ ಪ್ರಕ್ರಿಯೆಯಾಗಿದೆ.

ದೊಡ್ಡವರು ಯಾವಾಗ ತಮ್ಮ ಮಕ್ಕಳಿಗೆ ಆರ್ಥಿಕವಾಗಿ ಲಾಭವಾಗಬಹುದಾದ ವಿಚಾರಗಳತ್ತಲೇ ಗಮನಹರಿಸುತ್ತಾರೋ, ಆ ಹಂತದಲ್ಲಿ ಪೋಷಕರಾಗಿ ಅವರು ಸೋತಿರುತ್ತಾರೆ. ಪರೋಕ್ಷವಾಗಿ ತಮ್ಮ ಮಕ್ಕಳಿಗೇ ಮೋಸ ಮಾಡಿರುತ್ತಾರೆ. ಉದಾಹರಣೆಗೆ, ಭ್ರಷ್ಟಾಚಾರದ ಮೂಲಕ ವ್ಯವಸ್ಥೆಯನ್ನು ಹಾಳು ಮಾಡುವ ದೊಡ್ಡವರು, ನಂತರದ ದಿನಗಳಲ್ಲಿ ಅದೇ ಹುಳುಕು ವ್ಯವಸ್ಥೆಯನ್ನು ಹೊಸ ತಲೆಮಾರಿಗೆ ವರ್ಗಾಯಿಸಿ ಹೋಗಬೇಕಲ್ಲವೇ? ಅದೇ ವ್ಯವಸ್ಥೆಯಲ್ಲಿ ತಮ್ಮದೇ ಮಕ್ಕಳು ಒಂದಲ್ಲ ಒಂದು ದಿನ, ಒಂದಲ್ಲ ಒಂದು ಕಾರಣಕ್ಕಾಗಿ ಭಾಗವಹಿಸಲೇಬೇಕಲ್ಲವೇ? ಈ ನಿಧಾನಗತಿಯ ಯೋಚನೆ, ದೂರದೃಷ್ಟಿಯು ವಾಸ್ತವವಾಗಿ ಪಾಲನೆ ಪೋಷಣೆಯ ಮೂಲ ಸೂತ್ರವಿದ್ದಂತೆ.

ಪೇರೆಂಟಿಂಗ್ ಎಂದರೆ ಕೊಂಚ ಪುರುಸೊತ್ತು ಮಾಡಿಕೊಂಡು ನಿಧಾನವಾಗಿ ಯೋಚಿಸುವುದು, ನಂತರ ಕಾರ್ಯೋನ್ಮುಖರಾಗುವುದು.

ಪ್ರತಿಕ್ರಿಯಿಸಿ: feeback@sudha.co.in